**ಕರ್ನಾಟಕ ಸರ್ಕಾರ**

ಸಂಖ್ಯೆ: ಕಪಂಅ/ಅಭಿವೃದ್ಧಿ/3(ಭಾಗ-1)/2023

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 20.01.2024.

**ಸೇರ್ಪಡೆ ಜಂಟಿ ಸುತ್ತೋಲೆ**

**ವಿಷಯ:** ಗ್ರಾಮ ಪಂಚಾಯತಿ ಮಟ್ಟದಲ್ಲಿ "ಕೂಸಿನ ಮನೆ" ಶೀರ್ಷಿಕೆಯಡಿ ಶಿಶುಪಾಲನಾ ಕೇಂದ್ರಗಳನ್ನು ಸ್ಥಾಪಿಸುವ ಕುರಿತು.

**ಉಲ್ಲೇಖ:** **1.** ಜಂಟಿ ಸುತ್ತೋಲೆ ಸಂ: ಕಪಂಅ/ಅಭಿವೃದ್ಧಿ/343 (ಭಾಗ-2)/ 2023 ದಿನಾಂಕ:14.09.2023

**2.** ಕರ್ನಾಟಕ ರಾಜ್ಯ ಪಂಚಾಯತ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು ಇವರ ಪತ್ರ ಸಂಖ್ಯೆ: ಕರಾಪಂಅಅಕ್ಷೇಸಂಬೆಂ/ಹಿಪಂಅಅಸಿ&ಆರ್/117/2023-24, ದಿನಾಂಕ:04.01.2024.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನರೇಗಾ ಯೋಜನೆಯನ್ನು ಅತ್ಯುತ್ತಮವಾಗಿ ಅನುಷ್ಠಾನಗೊಳಿಸಲಾದ 4000 ಗ್ರಾಮ ಪಂಚಾಯತಿಗಳಲ್ಲಿ "ಕೂಸಿನ ಮನೆ" ಶಿಶುಪಾಲನಾ ಕೇಂದ್ರಗಳನ್ನು ಸ್ಥಾಪಿಸಲು ಹಾಗೂ ನಿರ್ವಹಣೆ ಮಾಡಲು ಸೂಕ್ತ ಮಾರ್ಗಸೂಚಿಗಳೊಂದಿಗೆ ಉಲ್ಲೇಖಿತ ಜಂಟಿ ಸುತ್ತೋಲೆಯಲ್ಲಿ ಹೊರಡಿಸಲಾಗಿದೆ.

ಕೂಸಿನ ಮನೆ ಶಿಶುಪಾಲನಾ ಕೇಂದ್ರಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಹಕಾರಿಯಾಗುವಂತೆ ಜಂಟಿ ಸುತ್ತೋಲೆಯ ಪುಟ ಸಂಖ್ಯೆ.12 ರಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜವಾಬ್ದಾರಿಗಳು ಶೀರ್ಷಿಕೆಯ ಕ್ರಮ ಸಂ (ii)ರ ಮೇಲ್ವಿಚಾರಣೆ ಶೀರ್ಷಿಕೆಯಡಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು/ಸಹಾಯಕ ಶಿಶು ಯೋಜನಾಭಿವೃದ್ಧಿ ಅಧಿಕಾರಿಗಳು/ಮೇಲ್ವಿಚಾರಕಿಯರು ಗ್ರಾಮದ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿದಾಗ ಕೂಸಿನ ಮನೆ ಕೇಂದ್ರಕ್ಕೂ ಕಡ್ಡಾಯವಾಗಿ ಭೇಟಿ ನೀಡಿ ಸೂಕ್ತ ಸಲಹೆ ಹಾಗೂ ಮಾರ್ಗದರ್ಶನ ನೀಡಲು ತಿಳಿಸಲಾಗಿದೆ.

ಉಲ್ಲೇಖ (2) ರಲ್ಲಿ ಕರ್ನಾಟಕ ರಾಜ್ಯ ಪಂಚಾಯತ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು ಇವರು ಮಾಡಿರುವ ಮನವಿಯಂತೆ ಉಲ್ಲೇಖ (1) ರ ಜಂಟಿ ಸುತ್ತೋಲೆಯಲ್ಲಿ ಪುಟ ಸಂಖ್ಯೆ (12) ರಲ್ಲಿ ತಿಳಿಸಿರುವ ಶಿಶು ಅಭಿವೃದ್ಧಿ

ಯೋಜನಾಧಿಕಾರಿಗಳು / ಸಹಾಯಕ ಶಿಶು ಯೋಜನಾಭಿವೃದ್ಧಿ ಅಧಿಕಾರಿಗಳು / ಮೇಲ್ವಿಚಾರಕಿಯರು ಗ್ರಾಮದ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿದಾಗ ಕೂಸಿನ ಮನೆ ಕೇಂದ್ರಕ್ಕೂ ಕಡ್ಡಾಯವಾಗಿ ಭೇಟಿ ನೀಡಿ ಸೂಕ್ತ ಸಲಹೆ ಹಾಗೂ ಮಾರ್ಗದರ್ಶನ ನೀಡುವುದು ಎಂಬ ಅಂಶವನ್ನು ಮತ್ತೊಮ್ಮೆ ಈ ಮೂಲಕ ತಿಳಿಸಲಾಗಿದೆ.

ಮುಂದುವರೆದು, ಕೂಸಿನ ಮನೆ ಶಿಶುಪಾಲನಾ ಕೇಂದ್ರಗಳಲ್ಲಿ ಇರುವ 3 ವರ್ಷದೊಳಗಿನ ಮಕ್ಕಳ ಪಾಲನೆ, ಪೋಷಣೆ, ಪೌಷ್ಠಿಕ ಆಹಾರ ತಯಾರಿಸುವಿಕೆ ಹಾಗೂ ವಿತರಣೆ, ಕೇಂದ್ರದಲ್ಲಿ ಮಕ್ಕಳ ನಿರ್ವಹಣೆಯ ಕುರಿತು ಕೇರ್ ಟೇಕರ್ಸ್‌ಗಳಿಗೆ ಸೂಕ್ತ ಮಾರ್ಗದರ್ಶನ ನೀಡುವ ಜವಾಬ್ದಾರಿ ಶಿಶು ಅಭಿವೃದ್ಧಿ ಯೋಜನೆಯ ಮೇಲ್ವಿಚಾರಿಕೆಯರದ್ದಾಗಿರುತ್ತದೆ.

ಉಳಿದಂತೆ, "ಕೂಸಿನ ಮನೆ" ಶಿಶುಪಾಲನಾ ಕೇಂದ್ರಕ್ಕೆ ಅಗತ್ಯವಿರುವ ಮೂಲ ಸೌಕರ್ಯಗಳನ್ನು ಒದಗಿಸುವ ಜವಾಬ್ದಾರಿ ಗ್ರಾಮ ಪಂಚಾಯಿತಿಗಳದ್ದಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ಜಂಟಿ ಸುತ್ತೋಲೆಯ ಪುಟ ಸಂಖ್ಯೆ (12) (ii)ರ ಅಡಿಯಲ್ಲಿ ಸೇರ್ಪಡಿಸಿಕೊಂಡು ಓದುವುದು.

(ಡಾ. ಜಿ.ಸಿ. ಪ್ರಕಾಶ್)
ಸರ್ಕಾರದ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರೀಕರ
ಸಬಲೀಕರಣ ಇಲಾಖೆ

(ಉಮಾ ಮಹಾದೇವನ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ(ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಇಲಾಖೆ